# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಜಲಾನಯನ ಅಭಿವೃದ್ಧಿ ಇಲಾಖೆಯ ವಿವಿಧ ಕಾರ್ಯಕ್ರಮಗಳಡಿ ಸಂಗ್ರಹವಾಗಿರುವ ಜಲಾನಯನ ಅಭಿವೃದ್ಧಿ ನಿಧಿಯನ್ನು ಉಪಯೋಗಿಸಲು ಮಾರ್ಗಸೂಚಿಯಲ್ಲಿ ಅನುಮೊದನೆ ನೀಡುವ ಬಗ್ಗೆ.

ಓದಲಾಗಿದೆ: 1) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ರವರ ಪ್ರಸ್ತಾವನೆ ಸಂಖ್ಯೆ: WDD/DDA/AO2/PMKSY/AFSD/28/18-19, ದಿ: 12-07-2018.

2) ಸರ್ಕಾರದ ಆದೇಶ ಸಂಖ್ಯೆ: AGD/78/AMS/2018, ದಿ:27-08-2018.

3) ಸರ್ಕಾರದ ಆದೇಶ ಸಂಖ್ಯೆ: AGD/78/AMS/2018, ದಿ:03-09-2018.

******

ಪೀಠಿಕೆ:

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರಿ ಆದೇಶದಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯ ವಿವಿಧ ಕಾರ್ಯಕ್ರಮಗಳಡಿ ಸಂಗ್ರಹವಾಗಿರುವ ಜಲಾನಯನ ಅಭಿವೃದ್ಧಿ ನಿಧಿಯನ್ನು ಉಪಯೋಗಿಸಲು ಮತ್ತು ಪ್ರಧಾನಮಂತ್ರಿ ಕೃಷಿ ಸಿಂಚಯಿ ಯೋಜನೆ ಜಲಾನಯನ ಅಭಿವೃದ್ಧಿ ಘಟಕದಡಿ ಹೊರಗುತ್ತಿಗೆ ಸಿಬ್ಬಂದಿಯ ಗೌರವ ಧನ ಹೆಚ್ಚಿಸುವ ಕುರಿತ ಮಾರ್ಗಸೂಚಿಗಳನ್ನು ಅನುಮೋದಿಸುವ ಅಧಿಕಾರವನ್ನು ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರಿಗೆ ಪ್ರತ್ಯಾಯೋಜಿಸಲಾಗಿದೆ.

ಮುಂದುವರೆದು, ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಪ್ರಧಾನಮಂತ್ರಿ ಕೃಷಿ ಸಿಂಚಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕದಡಿ ಹೊರಗುತ್ತಿಗೆ ಸಿಬ್ಬಂದಿಗೆ ಸಂಭಾವನೆಯನ್ನು ಹೆಚ್ಚಿಸಲು ಅನುಮತಿಯನ್ನು ಸರ್ಕಾರವು ನೀಡಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪ್ರಸ್ತಾವನೆಯಲ್ಲಿ, ಜಲಾನಯನ ಅಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳಡಿ ಲಭ್ಯವಿರುವ ಅನುದಾನವನ್ನು ಜಲಾನಯನ ಅಭಿವೃದ್ಧಿ ನಿಧಿ ಅಡಿ ಬಳಸಲು ಅನುಕೂಲವಾಗುವಂತೆ ಮಾರ್ಗಸೂಚಿಗಳಿಗೆ ಅನುಮೋದನೆ ನೀಡುವಂತೆ ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ಇವರು ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಜಲಾನಯನ ಅಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳ ಅಡಿಯಲ್ಲಿ ಲಭ್ಯವಿರುವ ಅನುದಾನವನ್ನು ಜಲಾನಯನ ಅಭಿವೃದ್ಧಿ ನಿಧಿ ಅಡಿ ಬಳಸಲು ಮಾರ್ಗಸೂಚಿಯನ್ನು ಅನುಮೋದಿಸಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 78 ಕೃಉಇ 2018, ಬೆಂಗಳೂರು, ದಿನಾಂಕ :28.09.2018.**

ಸರ್ಕಾರವು ಈ ಕೆಳಗಿನಂತೆ ಆದೇಶ ಹೊರಡಿಸಲು ಹರ್ಷಿಸುತ್ತದೆ:

## ಜಲಾನಯನ ಅಭಿವೃದ್ಧಿ ನಿಧಿಯನ್ನು ಬಳಸುವ ಬಗ್ಗೆ ಮಾರ್ಗಸೂಚಿಗಳು

1. **ಜಲಾನಯನ ಅಭಿವೃದ್ಧಿ ನಿಧಿ (WDF):**

ಎಲ್ಲಾ ಜಲಾನಯನ ಅಭಿವೃದ್ಧಿ ಯೋಜನೆಗಳಡಿ ಕೈಗೊಳ್ಳಲಾದ ಪ್ರತಿ ಜಲಾನಯನ ಹಂತದಲ್ಲಿ ಸಮುದಾಯ ಭೂಮಿಯಲ್ಲಿ ಸೃಜಿಸಲಾಗುವ ಆಸ್ತಿಗಳ ಯೋಜನಾ ನಂತರ ನಿರ್ವಹಣೆ ಮಾಡಲು ಅನುವಾಗುವಂತೆ "ಜಲಾನಯನ ಅಭಿವೃದ್ಧಿ ನಿಧಿ"ಯನ್ನು ಸೃಜಿಸಲಾಗಿರುತ್ತದೆ. ಜಲಾನಯನ ಅಭಿವೃದ್ಧಿ ನಿಧಿಗೆ ಸಾರ್ವಜನಿಕರು ವಂತಿಕೆ ನೀಡುವ ಮೇರೆಗೆ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಹಳ್ಳಿಗಳನ್ನು ಆಯ್ಕೆ ಮಾಡುವುದು ಶಾಸನಬದ್ಧ ಷರತ್ತುಗಳಲ್ಲಿ ಒಂದಾಗಿರುತ್ತದೆ. ಖಾಸಗಿ ಜಮೀನುಗಳಲ್ಲಿ ಕೈಗೊಳ್ಳಲಾಗುವ ನೈಸರ್ಗಿಕ ಸಂಪನ್ಮೂಲಗಳ ಕಾಮಗಾರಿಗಳ ವೆಚ್ಚದ ಶೇಕಡ ಕನಿಷ್ಟ 10 ರಷ್ಟು ಮಾತ್ರ ಜಲಾನಯನ ಅಭಿವೃದ್ಧಿ ನಿಧಿಯು ವಂತಿಗೆಯಾಗಿರುತ್ತದೆ. ಆದಾಗ್ಯೂ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ರೈತರ [illegible]

ಕಾಮಗಾರಿ ಕೈಗೊಳ್ಳಲು ನೈಸರ್ಗಿಕ ಸಂಪನ್ಮೂಲಗಳ ಕಾಮಗಾರಿ ಕೈಗೊಳ್ಳಲು ತಗಲುವ ವೆಚ್ಚದ ಕನಿಷ್ಠ ಶೇ. 5 ರಷ್ಟು ವಂತಿಕೆ.

ಈ ವಂತಿಕೆಯನ್ನು ಹಣದ ರೂಪದಲ್ಲಿ ಅಥವಾ ಕಾಮಗಾರಿಗಳ ಅನುಷ್ಠಾನದ ಸಮಯದಲ್ಲಿ ಸ್ವಯಂಪ್ರೇರಿತ ದುಡಿಮೆಯ ರೂಪದಲ್ಲಿ ಒಪ್ಪಬಹುದಾಗಿರುತ್ತದೆ. ಸ್ವಯಂಪ್ರೇರಿತ ದುಡಿಮೆಗೆ ಸಮನಾದ ಹಣಕಾಸಿನ ಮೌಲ್ಯವನ್ನು ಜಲಾನಯನ ಯೋಜನಾ ಖಾತೆಯಿಂದ ಜಲಾನಯನ ಅಭಿವೃದ್ಧಿ ನಿಧಿಯ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುವುದು. ಸಮುದಾಯ ಭೂಮಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳಿಂದ ಉತ್ಪತ್ತಿಯಾಗುವ ಬಳಕೆದಾರರ ಶುಲ್ಕ, ಉತ್ಪನ್ನಗಳ ಮಾರಾಟದಿಂದ ಸಂಗ್ರಹಿಸಲಾಗುವ ಹಣ ಮತ್ತು ಸಮುದಾಯದ ಆಸ್ತಿ ಮೂಲಗಳಿಂದ ಗಳಿಸಲಾಗುವ ಇತರೆ ಆದಾಯಗಳನ್ನು ಸಹ ಜಲಾನಯನ ಅಭಿವೃದ್ಧಿ ನಿಧಿ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು. ಈ ನಿಧಿಗೆ ವ್ಯಯಕ್ತಿಕ ಹಾಗೂ ದತ್ತಿ ಸಂಸ್ಥೆಗಳು ಉದಾರವಾದ ದೇಣಿಗೆಗಳನ್ನು ನೀಡುವಂತೆ ಪ್ರೋತ್ಸಾಹಿಸಬೇಕು. ಜಲಾನಯನ ಅಭಿವೃದ್ಧಿ ನಿಧಿ ಬ್ಯಾಂಕ್ ಖಾತೆಯನ್ನು ಸಂಬಂಧಪಟ್ಟ ಜಲಾನಯನದ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಜಂಟಿಯಾಗಿ ನಿರ್ವಹಿಸುವುದು.

2. ಜಲಾನಯನ ಅಭಿವೃದ್ಧಿ ನಿಧಿಯ ಬಳಕೆ:

ಜಲಾನಯನ ಅಭಿವೃದ್ಧಿ ಯೋಜನೆಯು ಮುಕ್ತಾಯಗೊಂಡ ನಂತರ ಸಮುದಾಯದ ಜಮೀನಿನಲ್ಲಿ ಸೃಜಿಸಲಾಗಿರುವ ಆಸ್ತಿಗಳ ನಿರ್ವಹಣೆ ಅಥವಾ ಯೋಜನೆಯಡಿ ಸಾಮಾನ್ಯ ಬಳಕೆಗೆ ಜಲಾನಯನ ಅಭಿವೃದ್ಧಿ ನಿಧಿಯನ್ನು ಕಾಯ್ದಿರಿಸುವುದು. ಖಾಸಗಿ ಜಮೀನುಗಳಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ದುರಸ್ತಿ/ ನಿರ್ವಹಣೆಯನ್ನು ಈ ನಿಧಿಯಿಂದ ಕೈಗೊಳ್ಳಲು ಅರ್ಹವಿರುವುದಿಲ್ಲ.

3. ಜಲಾನಯನ ಅಭಿವೃದ್ಧಿ ನಿಧಿ ಬಳಕೆಯ ಕಾರ್ಯಾಚರಣೆ ಮಾರ್ಗಸೂಚಿಗಳು:

ಅ. ಜಲಾನಯನ ಅಭಿವೃದ್ಧಿ ನಿಧಿಯ ಅಗತ್ಯತೆ:

ಜಲಾನಯನ ಅಭಿವೃದ್ಧಿ ಯೋಜನೆಗಳಡಿ ನಿರ್ಮಿಸಲಾದ ತಡೆ ಅಣೆ, ನಾಲಾ ಬದು, ಕಿಂಡಿ ಅಣೆ, ಜಿನುಗು ಕೆರೆ, ಕೃಷಿ ಹೊಂಡ ಗೋಕಟ್ಟೆ ಇತ್ಯಾದಿ ಸಮುಧಾಯಾದಾರಿತ ಹಾಗೂ ಹೆಚ್ಚು ಮೌಲ್ಯದ ನೀರು ಸಂಗ್ರಹಣಾ ರಚನೆಗಳು ಯೋಜನೆ ಮತ್ತು ಯೋಜನಾ ನಂತರದ ಅವಧಿಯಲ್ಲಿ ಮಳೆ, ಗಾಳಿ, ಬಿಸಿಲು, ಜಾನುವಾರುಗಳಿಂದ ಮತ್ತು ನೈಸರ್ಗಿಕ ವಿಪತ್ತುಗಳಿಂದ ಹಾನಿಗೊಳಗಾಗುವ ಸಂಭವಗಳಿರುತ್ತವೆ. ಅಂತಹ ಸಂದರ್ಭದಲ್ಲಿ ಖಾಸಗಿ ಜಮೀನಿನ ಆಸ್ತಿಗಳಲ್ಲಿನ ಹಾನಿಯನ್ನು ಫಲಾನುಭವಿಗಳೇ ದುರಸ್ತಿ ಮಾಡಿಸಿಕೊಳ್ಳಬೇಕಾಗಿರುತ್ತದೆ. ಆದರೆ ಸಮುದಾಯ ಭೂಮಿಯಲ್ಲಿನ ಆಸ್ತಿಗಳು ಹಾನಿಗೊಳಗಾದಲ್ಲಿ ನಿಧಿಯ ಮೂಲವಿಲ್ಲದಿದ್ದಲ್ಲಿ ದುರಸ್ತಿ ಮಾಡಲಾಗುವುದಿಲ್ಲ. ಆದುದರಿಂದ, ಈ ಆಸ್ತಿಗಳ ದೀರ್ಘಕಾಲದ/ಸುಸ್ಥಿರತೆಯನ್ನು ಖಾತರಿಪಡಿಸಿಕೊಳ್ಳುವ ಸಲುವಾಗಿ ಜಲಾನಯನ ಅಭಿವೃದ್ಧಿ ನಿಧಿ ಎಂದು ಕರೆಯಲ್ಪಡುವ ನಿಧಿಯನ್ನು ಸೃಜಿಸುವ ಅವಶ್ಯಕತೆಯಿರುತ್ತದೆ.

ಆ) ನಿಧಿಯ ಸೃಜನೆ:

ಆಯಾ ಜಲಾನಯನ ಅಭಿವೃದ್ಧಿ ಯೋಜನೆಯ ಮಾರ್ಗಸೂಚಿಗಳನ್ವಯ ಜನರ ಕೊಡುಗೆಗಳು, ಬಳಕೆದಾರರ ಶುಲ್ಕಗಳು, ಮಾರಾಟದಿಂದ ಬರುವ ಆದಾಯಗಳು ಮತ್ತು ಸಮುದಾಯ ಭೂಮಿಯಲ್ಲಿ ಸೃಜಿಸಲಾಗುವ ಆಸ್ತಿಗಳಿಂದ ಗಳಿಸುವ ಆದಾಯಗಳನ್ನು "ಜಲಾನಯನ ಅಭಿವೃದ್ಧಿ ನಿಧಿ" ಬ್ಯಾಂಕ್ ಖಾತೆಯಲ್ಲಿ ಜಮ ಮಾಡಬೇಕು. ಜಲಾನಯನ ಅಭಿವೃದ್ಧಿ ನಿಧಿಗೆ ಸಮುದಾಯದ ಸದಸ್ಯರಿಂದ ವ್ಯಯುಕ್ತಿಕ ಕೊಡುಗೆಗಳು ಹಾಗೂ ದತ್ತಿ ಸಂಸ್ಥೆಗಳು ದೇಣಿಗೆ ನೀಡುವಂತೆ ಪ್ರೋತ್ಸಾಹಿಸುವುದು.

ಇ) ನಿಧಿಯ ಉಸ್ತುವಾರಿ:

ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ಹೆಸರಿನಲ್ಲಿ ಪ್ರತ್ಯೇಕವಾದ ಜಂಟಿ ಖಾತೆಯನ್ನು ತೆರೆದು, ಮೇಲಿನ ಕಂಡಿಕೆಯನ್ವಯ ಸಂಗ್ರಹವಾಗುವ ಮೊತ್ತವನ್ನು ಸದರಿ ಖಾತೆಗೆ ಜಮಾ ಮಾಡುವುದು. ಬ್ಯಾಂಕ್ ಖಾತೆಯನ್ನು ಗ್ರಾಮ ಪಂಚಾಯತಿ ಅಧ್ಯಕ್ಷರು [illegible]

Scanned by CamScanner

ಮತ್ತು ಸಂಬಂಧಪಟ್ಟ ಸಹಾಯಕ ಕೃಷಿ ನಿರ್ದೇಶಕರು / PIAರವರುಗಳು (ಯೋಜನಾ ಅನುಷ್ಠಾನ ಸಂಸ್ಥೆ) ಜಂಟಿಯಾಗಿ ನಿರ್ವಹಿಸುವುದು. ಈ ರೀತಿಯಾಗಿ ಸಂಗ್ರಹಿಸಲಾದ ನಿಧಿಯನ್ನು ದೀರ್ಘಾವಧಿ ಸ್ಥಿರ ಠೇವಣಿಯಲ್ಲಿ (Long Term Fixed Deposit) ಇರಿಸತಕ್ಕದ್ದು. ಈ ಠೇವಣಿಯಿಂದ ಬರುವಂತಹ ಬಡ್ಡಿ ಹಾಗೂ ಪ್ರಧಾನ ಠೇವಣಿಯ ಭಾಗಶಃ ಮೊತ್ತವನ್ನು ಜಲಾನಯನ ಪ್ರದೇಶದಲ್ಲಿ ಸಮುದಾಯ ಭೂಮಿಯಲ್ಲಿ ಸೃಜಿಸಲಾಗಿರುವ ಆಸ್ತಿಗಳ ನಿರ್ವಹಣೆಗೆ (ದುರಸ್ತಿಗೆ) ಉಪಯೋಗಿಸಿಕೊಳ್ಳತಕ್ಕದ್ದು.

ಈ) ಕಾಮಗಾರಿಗಳ ದುರಸ್ತಿ:

ಯೋಜನಾ ಅನುಷ್ಠಾನ ಸಂಸ್ಥೆಯು ಆಗಿಂದ್ದಾಗ್ಗೆ ಮುಕ್ತಾಯಗೊಂಡ / ಕಾರ್ಯಗತಗೊಳಿಸಲಾದ ಜಲಾನಯನ ಪ್ರದೇಶಗಳಿಗೆ ಭೇಟಿ ನೀಡಿ ದುರಸ್ಥಿ ಮಾಡಬೇಕಿರುವ ಕಾಮಗಾರಿಗಳನ್ನು ಗುರುತಿಸುವುದು. ಫಲಾನುಭವಿಗಳ ಜಮೀನಿನಲ್ಲಿ ಸೃಜಿಸಲಾದ ಆಸ್ತಿಗಳ ದುರಸ್ತಿಯನ್ನು ಅವರೇ ಕೈಗೊಳ್ಳುವಂತೆ ಮನವೊಲಿಸುವುದು. ಸಮುದಾಯ ಜಮೀನುಗಳಲ್ಲಿ ಸೃಜಿಸಲಾದ ಆಸ್ತಿಗಳ ದುರಸ್ಥಿಗಾಗಿ ಅಂದಾಜು ಪಟ್ಟಿಯನ್ನು ತಯಾರಿಸಿ ಗ್ರಾಮ ಪಂಚಾಯಿತಿಗಳ ಸೂಕ್ತ ಶಿಫಾರಸ್ಸಿನೊಂದಿಗೆ ಸಕ್ಷಮ ಪ್ರಾಧಿಕಾರವು ಅಂದಾಜು ಪಟ್ಟಿಗೆ ಅನುಮೋದನೆ ನೀಡುವುದು. ಸೂಕ್ತ ಮಂಜೂರಾತಿ ಮತ್ತು ಗ್ರಾಮ ಪಂಚಾಯಿತಿಯಿಂದ ಜಲಾನಯನ ಅಭಿವೃದ್ಧಿ ನಿಧಿಯ ಅನುದಾನ ಬಿಡುಗಡೆ ನಂತರ ಇಲಾಖೆಯ ಲೆಕ್ಕ ಪತ್ರ ವಿಧಾನ ಮತ್ತು ಜಾರಿಯಲ್ಲಿರುವ ದರಸೂಚಿಯನ್ವಯ ಕಾಮಗಾರಿಗಳ ದುರಸ್ತಿಯನ್ನು PIAಯು ಕೈಗೊಳ್ಳುವುದು.

<u>ಜಲಾನಯನ ಅಭಿವೃದ್ಧಿ ನಿಧಿಯಲ್ಲಿ ಲಭ್ಯವಾಗುವ ಮೊತ್ತವನ್ನು ಈ ಕೆಳಗಿನ ಸ್ಲಾಬ್‌ಗಳ ಪ್ರಕಾರ ಉಪಯೋಗಿಸುವುದು.</u>

| ಕ್ರ. ಸಂ. | ವರ್ಷ | ಠೇವಣಿಯ ಶೇಕಡವಾರು | ಸಂಗ್ರಹಣೆಯಾದ ಬಡ್ಡಿಯ ಶೇಕಡವಾರು |
|---|---|---|---|
| 1 | 2 | 3 | 4 |
| 1 | 1ನೇ ವರ್ಷ | 10% | 30% |
| 2 | 2ನೇ ವರ್ಷ | 15% | 25% |
| 3 | 3ನೇ ವರ್ಷ | 20% | 20% |
| 4 | 4ನೇ ವರ್ಷ | 25% | 15% |
| 5 | 5ನೇ ವರ್ಷ | 30% | ಉಳಿಕೆ ಬಡ್ಡಿ ಮೊತ್ತ |

ಐದು ವರ್ಷದ ಅವಧಿಯಲ್ಲಿ ಜಲಾನಯನ ಅಭಿವೃದ್ಧಿ ನಿಧಿ ಖಾತೆಯಲ್ಲಿ ಲಭ್ಯವಿರುವ ಸಂಪೂರ್ಣ ಹಣವನ್ನು ಬಳಕೆ ಮಾಡಬಹುದಾಗಿದೆ. ಆದರೆ ಪ್ರತಿ ದುರಸ್ತಿಯ ವೆಚ್ಚ ಆಯಾ ಕಾಮಗಾರಿಯ ವೆಚ್ಚದ ಶೇ.25ರಷ್ಟು ಮೊತ್ತವನ್ನು ಮೀರಬಾರದು. ಐದು ವರ್ಷಗಳ ನಂತರ ಸಮುದಾಯ ಆಸ್ತಿಗಳ ನಿರ್ವಹಣೆಯನ್ನು ಆಯಾಯ ಗ್ರಾಮ ಪಂಚಾಯ್ತಿಗಳು ಮಾಡಬೇಕಾಗಿರುತ್ತದೆ.

ಉ) ನಿರ್ವಹಿಸಬೇಕಾದ ವಹಿಗಳು / ದಾಖಲೆಗಳು:

ಜಲಾನಯನ ಅಭಿವೃದ್ಧಿ ನಿಧಿಗೆ ಸಂಬಂಧಪಟ್ಟಂತೆ ಈ ಕೆಳಗೆ ಪಟ್ಟಿ ಮಾಡಿರುವ ದಾಖಲೆ / ವಹಿಗಳನ್ನು ನಿರ್ದಿಷ್ಟ ಜಲಾನಯನದ ಗ್ರಾಮ ಪಂಚಾಯತಿಯಲ್ಲಿ ನಿರ್ವಹಿಸಬೇಕು.

a) ಜಲಾನಯನ ಅಭಿವೃದ್ಧಿ ನಿಧಿ ಸಂಗ್ರಹಣೆ ವಹಿ
b) ದೇಣಿಗೆ ರಸೀದಿ ಪುಸ್ತಕಗಳು
c) ದುರಸ್ತಿ ಮಾಡಿಸಲಾಗಿರುವ ಕಾಮಗಾರಿಗಳ ವಹಿ
d) ಅಂದಾಜು ಪತ್ರಿಕೆ ಮಂಜೂರಾತಿ ಕಡತ
e) ನಗದು ಪುಸ್ತಕಗಳು ಮತ್ತು ಅಳತೆ ಪುಸ್ತಕಗಳು

Scanned by CamScanner

ಊ) ಕಾಮಗಾರಿ ಮತ್ತು ಲೆಕ್ಕ ತಪಾಸಣೆ:

ಜಲಾನಯನ ಅಭಿವೃದ್ಧಿ ನಿಧಿಯ ಲೆಕ್ಕ ಹಾಗೂ ಕಾಮಗಾರಿಗಳ ಗುಣಮಟ್ಟವನ್ನು ಪರಿಶೀಲಿಸಿ ಮಾಡಲು ಕೃಷಿ ಇಲಾಖೆ /ಜಲಾನಯನ ಅಭಿವೃದ್ಧಿ ಇಲಾಖೆಗಳು ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತವೆ.

ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ಇವರು ಯೋಜನೆಯನ್ನು ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಅನುಷ್ಠಾನಗೊಳಿಸತಕ್ಕದ್ದು. ಸರ್ಕಾರದ ಸಕ್ಷಮ ಪ್ರಾಧಿಕಾರದ ಅನುಮತಿಯಿಲ್ಲದೆ, ಯಾವುದೇ ರೀತಿಯ ಬದಲಾವಣೆ ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಎನ್.ರಾಜೇಶ್ವರಿ 28/09/18
(ಎನ್.ರಾಜೇಶ್ವರಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ).
ಕೃಷಿ ಇಲಾಖೆ (ಯೋಜನೆ)
28/09/18

ಇವರಿಗೆ,

1. ಪ್ರಧಾನ ಮಹಾಲೇಖಪಾಲರು (G&SSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, (ಪಿ.ಬಿ. ನಂ. 5398), ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ, ಪಾರ್ಕ್‌ಹೌಸ್, ರಸ್ತೆ, (ಪಿ.ಬಿ. ನಂ. 5329), ಬೆಂಗಳೂರು.
3. ಮಹಾಲೇಖಪಾಲರು, (WF & RA), ರೆವಿನ್ಯೂ ಆಡಿಟ್ ವಿಂಗ್, ಕಾಫಿ ಬೋರ್ಡ್ ಕಟ್ಟಡ, ಬೆಂಗಳೂರು-01.
4. ಮಹಾಲೇಖಪಾಲರು, (Audit &Accounts), ಬೆಂಗಳೂರು.
5. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು.
8. ಜಂಟಿ ಕಾರ್ಯದರ್ಶಿಗಳು, ಭೂ ಸಂಪನ್ಮೂಲ ಇಲಾಖೆ, ಗ್ರಾಮೀಣ ಅಭಿವೃದ್ಧಿ ಮಂತ್ರಾಲಯ, ಭಾರತ ಸರ್ಕಾರ, ಬ್ಲಾಕ್ ಸಂ:11, 6ನೇ ಮಹಡಿ, ಸಿ.ಜಿ.ಒ ಕಾಂಪ್ಲೇಕ್ಸ್, ಲೋಧಿ ರಸ್ತೆ, ನವ ದೆಹಲಿ-110003.
9. ಆಯುಕ್ತರು / ನಿರ್ದೇಶಕರು ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
10. ಆಯುಕ್ತರು / ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
11. ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್:ಆಯುಕ್ತರು/ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರ ಮುಖಾಂತರ.
12. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
13. ಜಂಟಿ ನಿರ್ದೇಶಕರು, ಎಸ್.ಎಚ್.ಟಿ, ಬೆಂಗಳೂರು.
14. ಉಪ ನಿರ್ದೇಶಕರು ಟಿ.ಎನ್.ಎಮ್.ಸಿ, ಖನಿಜ ಭವನ, ಬೆಂಗಳೂರು.
15. ಸರ್ಕಾರದ ಉಪ ಕಾರ್ಯದರ್ಶಿಗಳು-1&2, ಕೃಷಿ ಇಲಾಖೆ, ಬೆಂಗಳೂರು.
16. ಸರ್ಕಾರದ ಉಪ ಕಾರ್ಯದರ್ಶಿಗಳು ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ, ಬೆಂಗಳೂರು.
17. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಎಫ್.ಆರ್&ಸಿ.ಸಿ), ವಿಧಾನ ಸೌಧ, ಬೆಂಗಳೂರು.
18. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನ ಸೌಧ, ಬೆಂಗಳೂರು.
19. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು

Scanned by CamScanner